# ಸಮಕಾಲೀನ ಭಾರತೀಯ ಸಾಹಿತ್ಯ : ವಿವಿಧ ವಿಮರ್ಶೆಗಳು


## ಸಂಪುಟ–II

ಪ್ರಧಾನ ಸಂಪಾದಕರು

**ಪ್ರೊ. ಎಸ್.ಕೆ. ಪವಾರ**

ಸಹ ಸಂಪಾದಕರು

ಪ್ರೊ. ಪ್ರಭಾ ಭಟ್
ಡಾ. ಎಲ್.ಪಿ. ಲಮಾಣಿ
ಡಾ. ಶೀಲಾ ಚೌಗುಲೆ
ಡಾ. ನೀತಾ ದೌಲತಕರ



ಹಿಂದಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಸಮಕಾಲೀನ ಭಾರತೀಯ ಸಾಹಿತ್ಯ : ವಿವಿಧ ವಿಮರ್ಶೆಗಳು

(Collective Essays Presented at International Conference on "Diverse Criticism in Contemporary Indian Literature)


ಪ್ರಧಾನ ಸಂಪಾದಕರು : ಪ್ರೊ. ಸಿತಾರಾಮ ಕೆ. ಪವಾರ

© : ಪ್ರಧಾನ ಸಂಪಾದಕರು

ಪ್ರಕಾಶಕರು : ಅಮನ ಪ್ರಕಾಶನ ಕಾನಪುರ (ಉ.ಪ್ರ.)

ಮುದ್ರಕರು : ಸರಸ್ವತಿ ಪ್ರಿಂಟರ್ಸ್, ಧಾರವಾಡ.

ವರ್ಷ : 2018

ಪುಟಗಳು : 549

ISBN : 978-93-86604-74-3

ಬೆಲೆ : 245

ಪ್ರತಿಗಳು : 300



ಎಲ್ಲ ಹಕ್ಕುಗಳು ಸುರಕ್ಷಿತವಾಗಿವೆ.


ಈ ಪುಸ್ತಕದಲ್ಲಿ ಪ್ರಕಟಗೊಂಡ ಲೇಖನಗಳಲ್ಲಿನ ವಿಚಾರ ಹಾಗೂ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸಂಪಾದಕರು, ಸಂಪಾದಕ ಮಂಡಳಿ, ಪ್ರಕಾಶಕರು ಹಾಗೂ ಮುದ್ರಕರು ಜವಾಬ್ದಾರರಲ್ಲ.

# " ಬದುಕು ಬಯಲು – ಎ. ರೇವತಿ "
## (ಹಿಜ್ರಾ ಒಬ್ಬಳ ಆತ್ಮಕಥೆ)

ರಾಮರೆಡ್ಡಿ.ಕೆ.,

ಮಂಗಳಮುಖಿ ಎಂದರೆ ಹೆಣ್ಣು ಅಲ್ಲದ ಗಂಡು ಅಲ್ಲದ ವ್ಯಕ್ತಿಯ ಮನಸ್ಥಿತಿ. ತೃತೀಯ ಲಿಂಗ ಅಥವಾ ಮಂಗಳಮುಖಿ ಎನ್ನುವ ಪರಿಭಾಷೆಗಳು ಇತ್ತೀಚೆಗೆ ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ಇವರನ್ನು ನಪುಂಸಕ, ಚಕ್ಕ, ಖೋಜಾ, ಹಿಜಡಾ, ಹಿಜರಾ, ಚನ್ನಪಟ್ಟಣ, ಜೋಗಪ್ಪ, ನಂಬರ್ ನೈನ್, ಹೈದ್ರಾಬಾದಿ, ದ್ವಿಲಿಂಗಿ, ಶಿಖಂಡಿ ಮುಂತಾದ ಪದಗಳು ಬಳಕೆಯಾಗುತ್ತಿದ್ದವು. ಹಿಜರಾ ಎನ್ನುವ ಪದವು ಪರ್ಷಿಯನ್ ಭಾಷೆಯಿಂದ ಬಂದದ್ದು. ಅಂದರೆ ವಲಸೆ ಹೋಗುವವರು ಎಂದರ್ಥ.

ಜೈವಿಕವಾಗಿ ಗಂಡಿನಂತೆ ಹುಟ್ಟಿ ಭಾವನಾತ್ಮಕವಾಗಿ ಹೆಣ್ಣಿಗೆ ವರ್ತಿಸುವಂತಹ ಸ್ವಭಾವಗಳು ಹನ್ನೆರಡು ಹದಿಮೂರರ ವಯಸ್ಸಿನಲ್ಲಿ ಕೆಲವು ಮಕ್ಕಳಲ್ಲಿ ಕಂಡು ಬರುತ್ತವೆ. ಆಗ ಅವರ ಭಾವನೆಗಳು ಪಲ್ಲಟವಾಗಿ ತನ್ನ ಸಹಪಾಠಿಯತ್ತ ಲೈಂಗಿಕ ಆಕರ್ಷಣೆಗೆ ಒಳಗಾಗಬಹುದು. ಇಂತಹ ಮನೋಭಾವನೆಗಳು ಇವರಲ್ಲಿ ಅಷ್ಟೇ ಅಲ್ಲ. ಈ ವಯಸ್ಸಿನ ಬಹುತೇಕರಲ್ಲಿ ಕಂಡುಬರುವ ಸಂಭವವೇ ಹೆಚ್ಚು. ಆದ್ರೆ ಇದರ ಕಡೆಗೆ ವಾಲುವುದು ಕೆಲವು ಮಕ್ಕಳು ಮಾತ್ರ ಎಂದು ಮನೋತಜ್ಞರು ಅಭಿಪ್ರಾಯಪಡುತ್ತಾರೆ. ಇಂತಹವುಗಳನ್ನು ಬಹಳ ಜಾಗರೂಕರಾಗಿ ಎಳವೆಯಲ್ಲಿ ಚಿವುಟಿ ಹಾಕಬೇಕು. ಆಗ ಮಾತ್ರ ತೃತೀಯ ಲಿಂಗಿಗಳಾಗುವ ಅಪಾಯದಿಂದ ಪಾರು ಮಾಡಬಹುದು.

ಗಂಡು ಹೆಣ್ಣಿನ ನಡುವಿನ ಆಕರ್ಷಣೆ ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರುವ ಒಂದು ಪ್ರಕ್ರಿಯೆ. ಒಂದು ಪ್ರಾಚೀನ ಕಥೆಯ ಪ್ರಕಾರ ಮೊದಲಿಗೆ ಗಂಡೂ ಅಲ್ಲದ ಹೆಣ್ಣೂ ಅಲ್ಲದ ಮಾನವ ಜೀವಿಯೊಂದು ಇತ್ತಂತೆ. ಒಂದು ದಿನ ಆ ಜೀವಿಯು ಇದ್ದಕ್ಕಿದ್ದ ಹಾಗೆ ಎರಡು ಭಾಗವಾಗಿ ಒಂದು ಗಂಡಾಗಿಯೂ, ಇನ್ನೊಂದು ಹೆಣ್ಣಾಗಿಯೂ ಜೀವ ಪಡೆದು ಹೋಗಿತ್ತಂತೆ. ಅಂದಿನಿಂದ ಈ ಎರಡೂ ಭಾಗಗಳು ಒಂದಾಗಲು ನಿರಂತರವಾಗಿ ಪ್ರಯತ್ನಿಸುತ್ತಿದೆಯಂತೆ. ಈ ಆಕರ್ಷಣೆಯನ್ನು ತಡೆಯಲು ಸಾಧ್ಯವಿಲ್ಲ. ತಡೆದಷ್ಟೂ ಅದು ಉಲ್ಬಣಗೊಳ್ಳುತ್ತಲೇ ಹೋಗುತ್ತದೆ ಎಂದು ಹೇಳಲಾಗುತ್ತದೆ.

ಮತ್ತೊಂದೆಡೆ ಸಲಿಂಗರತಿಯ ಉಲ್ಲೇಖಗಳು ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲೂ ಮತ್ತು ಕಾಲಘಟ್ಟಗಳಲ್ಲೂ ಕಂಡು ಬಂದ ನಿದರ್ಶನಗಳಿವೆ. ಆಫ್ರಿಕಾ, ಗ್ರೀಸ್, ರೋಮ್, ರಷ್ಯಾ ಈಜಿಪ್ತ್, ಜಪಾನ್ ಮೊದಲಾದ ದೇಶಗಳಲ್ಲಿ ಸಲಿಂಗರತಿಯ ಪ್ರತಿಮೆಗಳು, ಚಿತ್ರಗಳು, ವಾಸ್ತುಶಿಲ್ಪಗಳು ಕಾಣಸಿಗುತ್ತವೆ. ದೇವಸ್ಥಾನದ ಗೋಡೆಗಳಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವವರ ಚಿತ್ರ ಸಂಕೇತಗಳಿವೆ. ವಾತ್ಸಾಯನನ ಕಾಮಸೂತ್ರದಲ್ಲಿಯೂ ಹಲವು ವಿಶಿಷ್ಟವಾದ ಉಲ್ಲೇಖಗಳಿವೆ. ಬಹುಪತ್ನಿತ್ವವನ್ನು ಹೊಂದಿದ್ದ ಅರಸರುಗಳ ರಾಣಿಯರುಗಳಲ್ಲಿ ಇಂತಹ ವಿಲಕ್ಷಣ ಸಂಬಂಧಗಳ ಕಥೆಗಳು ಹಾಸುಹೊಕ್ಕಾಗಿವೆ.

ಪುರಾಣದ ಕಥೆಯನ್ನು ಅವಲೋಕಿಸಿದರೆ ಅಲ್ಲೊಂದು ಸುಂದರ ಕಥೆಯು ಕಾಣಸುತ್ತದೆ. ಹರಿಹರರ ನಡುವಿನ ಕಾಮದಿಂದ ಹುಟ್ಟಿದ ಅಯ್ಯಪ್ಪನ ಕಥೆ. ಸ್ಕಂದಪುರಾಣದಲ್ಲಿ ಬರುವ ಇಬ್ಬರು ಬ್ರಾಹ್ಮಣ ಗಂಡಸರು ಗಂಡ ಹೆಂಡತಿಯಂತೆ ಬದುಕಿದ ಪ್ರಸಂಗ, ವಾಲ್ಮೀಕಿ ರಾಮಾಯಣದಲ್ಲಿ ಇಬ್ಬರು ರಾಕ್ಷಸ ಸ್ತ್ರೀಯರು ಅಪ್ಪಿ ಮುದ್ದಾಡುತ್ತಿದ್ದ ದೃಶ್ಯ, ಇಬ್ಬರು ಹೆಂಗಸರ ಮಿಲನದಿಂದ ಹುಟ್ಟಿದ ಭಗೀರಥನ ಕಥೆ,

# ಸಮಕಾಲೀನ ಭಾರತೀಯ ಸಾಹಿತ್ಯ : ವಿವಿಧ ವಿಮರ್ಶೆಗಳು

## ಸಂಪುಟ–II


ಪ್ರಧಾನ ಸಂಪಾದಕರು

**ಪ್ರೊ. ಎಸ್.ಕೆ. ಪವಾರ**

ಸಹ ಸಂಪಾದಕರು

**ಪ್ರೊ. ಪ್ರಭಾ ಭಟ್**
**ಡಾ. ಎಲ್.ಪಿ. ಲಮಾಣಿ**
**ಡಾ. ಶೀಲಾ ಚೌಗುಲೆ**
**ಡಾ. ನೀತಾ ದೌಲತಕರ**





ಹಿಂದಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಮಕಾಲೀನ ಭಾರತೀಯ ಸಾಹಿತ್ಯ : ವಿವಿಧ ವಿಮರ್ಶೆಗಳು
(Collective Essays Presented at International Conference on
"Diverse Criticism in Contemporary Indian Literature)


| | | |
|---|---|---|
| ಪ್ರಧಾನ ಸಂಪಾದಕರು | : | ಪ್ರೊ. ಸಿತಾರಾಮ ಕೆ. ಪವಾರ |
| © | : | ಪ್ರಧಾನ ಸಂಪಾದಕರು |
| ಪ್ರಕಾಶಕರು | : | ಅಮನ ಪ್ರಕಾಶನ ಕಾನಪುರ (ಉ.ಪ್ರ.) |
| ಮುದ್ರಕರು | : | ಸರಸ್ವತಿ ಪ್ರಿಂಟರ್ಸ್, ಧಾರವಾಡ. |
| ವರ್ಷ | : | 2018 |
| ಪುಟಗಳು | : | 549 |
| ISBN | : | 978-93-86604-74-3 |
| ಬೆಲೆ | : | 245 |
| ಪ್ರತಿಗಳು | : | 300 |



ಎಲ್ಲ ಹಕ್ಕುಗಳು ಸುರಕ್ಷಿತವಾಗಿವೆ.


ಈ ಪುಸ್ತಕದಲ್ಲಿ ಪ್ರಕಟಗೊಂಡ ಲೇಖನಗಳಲ್ಲಿನ ವಿಚಾರ ಹಾಗೂ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸಂಪಾದಕರು, ಸಂಪಾದಕ ಮಂಡಳಿ, ಪ್ರಕಾಶಕರು ಹಾಗೂ ಮುದ್ರಕರು ಜವಾಬ್ದಾರರಲ್ಲ.

# ಶಾಂತಿನಾಥ ದೇಸಾಯಿ ಕಥಾ ಸಾಹಿತ್ಯ – ಒಂದು ಸ್ತ್ರೀವಾದಿ ಚಿಂತನೆ

ಡಾ.ಅರುಂಧತಿ ಎಫ್. ಬದಾಮಿ

ಶತಶತಮಾನಗಳಿಂದ ತಮ್ಮ ಮೇಲಾಗುತ್ತಿರುವ ದೌರ್ಜನ್ಯ, ಅನ್ಯಾಯ, ಶೋಷಣೆಗಳಿಂದ ಮುಕ್ತಿ ಹೊಂದಲು ಬಯಸಿದ ಸ್ತ್ರೀ ಮನಸ್ಸು ಅವುಗಳಿಂದ ಮುಕ್ತಿ ಹೊಂದಲು ಬಯಸಿತು. ಮಾತ್ರವಲ್ಲ ತಮ್ಮ ಶೋಷಣೆಗೆ ಕಾರಣವಾದವುಗಳನ್ನೆಲ್ಲ ಅರಿತು ಪ್ರತಿಭಟಿಸಲು ಮುಂದಾದರು. ಇದರ ಪರಿಣಾಮವಾಗಿ ಸ್ತ್ರೀಯರು ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮನ್ನು ಪುರುಷನ ಸಮಾನವಾಗಿ ಕಾಣಬೇಕೆಂದು ಒತ್ತಾಯ ಮಾಡಲಾರಂಭಿಸಿದ ಕಾರಣವಾಗಿ ಹುಟ್ಟಿಕೊಂಡ ಚಳುವಳಿಯೇ ಸ್ತ್ರೀವಾದಿ ಚಳುವಳಿಯಾಗಿದೆ. ಸ್ತ್ರೀವಾದಿ ಚಳುವಳಿ ಏಕಕಾಲಕ್ಕೆ ಸಾಮಾಜಿಕ, ಸಾಹಿತ್ಯಿಕ, ವೈಚಾರಿಕ ಚಳುವಳಿಯಾಗಿದ್ದು ಸ್ತ್ರೀ ಸಮಾನತೆಯನ್ನು ಬಯಸಿ ಸ್ತ್ರೀಯರ ಮೇಲಾಗುತ್ತಿರುವ ದೌರ್ಜನ್ಯವನ್ನು ಖಂಡಿಸಿ ಅದನ್ನು ಸರಿಪಡಿಸುವುದಕ್ಕೋಸ್ಕರ ಹುಟ್ಟಿಕೊಂಡ ಚಿಂತನೆಯೇ ಸ್ತ್ರೀವಾದವಾಗಿದೆ.

ಸ್ತ್ರೀವಾದ ಎಂಬ ಪದ ಪಾಶ್ಚಾತ್ಯರ Feminism ಎಂಬ ಪದಕ್ಕೆ ಸಂವಾದಿಯಾಗಿ ಬಂದಿದೆ. ಈ ಪದ ಪಾಶ್ಚಾತ್ಯರಿಂದ ನಮ್ಮ ದೇಶಕ್ಕೆ ಆಮದಾಗಿದ್ದರೂ ಕಾಲ, ದೇಶಗಳ ಭಿನ್ನತೆಗೆ ತಕ್ಕಂತೆ ಸ್ತ್ರೀವಾದದ ತಾತ್ವಿಕ ಸಿದ್ಧಾಂತಗಳು ಭಿನ್ನತೆಯನ್ನು ಪಡೆದುಕೊಳ್ಳುತ್ತಾ ಸಾಗಿವೆ. ಪಶ್ಚಿಮದ ಸ್ತ್ರೀವಾದದ ವಿಚಾರ, ಚಿಂತನೆಗಳನ್ನೇ ಭಾರತೀಯರ ಸಂದರ್ಭದಲ್ಲೂ ಅನ್ವಯಿಸಲಿಕ್ಕೆ ಆಗುವುದಿಲ್ಲ. ಜಾತ್ಯಾತೀತವಾದ ನಮ್ಮ ದೇಶದಲ್ಲಿಯ ಮಹಿಳೆಯರು ವಿಭಿನ್ನ ಭಾಷೆ, ಧರ್ಮ, ಜಾತಿ, ವರ್ಗ, ಸಂಸ್ಕೃತಿ, ಇತ್ಯಾದಿಗಳಲ್ಲಿಯೂ ಭಿನ್ನತೆಯಿಂದ ಕೂಡಿದ್ದಾರೆ. ಆದರೆ ಪಶ್ಚಿಮದ ಸಂದರ್ಭದಲ್ಲಿ ಅವರದು ಏಕ ರೀತಿಯ ಸಂಸ್ಕೃತಿಯಾಗಿರುವುದರಿಂದ ಈ ಸಮಸ್ಯೆ ಉದ್ಭವಿಸಲಾರದು. **"ಪಶ್ಚಿಮದ ಸ್ತ್ರೀವಾದವನ್ನು ಇಲ್ಲಿ ನೇರವಾಗಿ ಅನ್ವಯ ಮಾಡಲಾಗದು........ಅದರ ಕೆಲವು ಚೌಕಟ್ಟುಗಳನ್ನು ನಾವು ಬದಲಿಸಲೇಬೇಕಾಗುತ್ತದೆ. ಭಾರತದಂಥ ಸಮಾಜಗಳು ಹೊಂದಿರುವ ವಿಶಿಷ್ಟ ವ್ಯತ್ಯಾಸಗಳನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲ"[1] ಹಾಗೆಯೇ "ಸ್ತ್ರೀವಾದವು ಯಾವುದೇ ಒಂದು ದೇಶಕ್ಕೆ ಸೀಮಿತವಾಗದೆ ಬೇರೆ ಬೇರೆ ದೇಶಗಳ, ಸ್ತ್ರೀಯರ ಪರಂಪರೆ ಸ್ಥಿತಿಗತಿಗಳಿಗನುಗುಣವಾಗಿ ಭಿನ್ನ ಭಿನ್ನ ಸ್ವರೂಪವನ್ನು ಪಡೆದು ವಿಕಾಸವನ್ನು ಹೊಂದುತ್ತಿರುವುದು ಕುತೂಹಲಕರವಾಗಿದೆ"[2]**


ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದವು ಭಾರತೀಯ ಸಮಾಜದ ಪಿತೃ ಪ್ರಧಾನ ವ್ಯವಸ್ಥೆಯಲ್ಲಿಯ ಹೆಣ್ಣಿನ ಶೋಷಣೆಯನ್ನು ಖಂಡಿಸುತ್ತಾ, ತನ್ನ ವಿಶಿಷ್ಟ ಪರಿಸರ ಸಂಸ್ಕೃತಿಗೆ ತಕ್ಕಂತೆ ಹುಟ್ಟಿಕೊಂಡಿದೆ. ಅದು ಪಶ್ಚಿಮದಿಂದ ಆಮದಾಗಿರುವ ಸರಕು ಎಂಬ ಮಾತುಗಳು ಸಮ್ಮತವಾದವುಗಳಲ್ಲ. ಏಕೆಂದರೆ ನಾವು ಈಗಾಗಲೇ ಪಶ್ಚಿಮದಿಂದ ಅನೇಕ ಸಾಮಾಜಿಕ, ಸಾಹಿತ್ಯಿಕ ಚಳುವಳಿಗಳನ್ನು, ತತ್ವಗಳನ್ನು ಸ್ವೀಕರಿಸಿದ್ದು ಇವೆಲ್ಲವುಗಳಿಗೂ ಇಲ್ಲದ ಮಡಿವಂತಿಕೆ ಸ್ತ್ರೀವಾದಕ್ಕೆ ಯಾಕೆ ಎಂಬುದನ್ನು ಅಗತ್ಯವಾಗಿಯೂ ವಿಶ್ಲೇಷಿಸಬೇಕು. ಭಾರತೀಯ ಸಂದರ್ಭದಲ್ಲಿ 1975 ರ ಅವಧಿಯಲ್ಲಿ ಪ್ರವೇಶ ಪಡೆದ ಸ್ತ್ರೀವಾದ ತದನಂತರದಲ್ಲಿ ಒಂದು ಚಳುವಳಿಯ ರೂಪ ಪಡೆದುಕೊಂಡು ವ್ಯಾಪಕವಾಗಿ ಬೆಳೆದು ನಂತೆತು. ಸ್ತ್ರೀವಾದದ ಪರ ಮತ್ತು ವಿರೋಧವಾಗಿ ಅನೇಕ ಅಲೆಗಳು ಎದ್ದವು. ಈ ಚರ್ಚೆಗೆ ಸಾಹಿತ್ಯವೂ ಒಂದು ವೇದಿಕೆಯಾಯಿತು. ಅನಾದಿಕಾಲದಿಂದಲೂ ಸ್ತ್ರೀಯರು ಅನುಭವಿಸುತ್ತಿದ್ದ ಮೂಕವೇದನೆಗೆ ಒಂದು ಮೂರ್ತ ರೂಪ ದೊರೆಯಿತು. ಸ್ತ್ರೀ ಸಮಸ್ಯೆಗಳು ಆಕೆಯ ಮನಸ್ಸಿನ ತಲ್ಲಣಗಳು, ತಾಕಲಾಟಗಳಿಗೆ ಲಿಂಗ ತಾರತಮ್ಯವನ್ನು ಮೀರಿ ಸ್ತ್ರೀ-ಪುರುಷರಿಬ್ಬರು ತಮ್ಮ ಬರವಣಿಗೆಯ ಮುಖಾಂತರ ನ್ಯಾಯ ಒದಗಿಸಿಕೊಡುವ ಪ್ರಯತ್ನವನ್ನು ಮಾಡಿದರು.

ಸ್ತ್ರೀ ಸಂವೇದನೆಯೆಂಬುದು ಸ್ತ್ರೀಯರಿಗಷ್ಟೇ ಸಂಬಂಧಿಸಿದಲ್ಲ ಮತ್ತು ಸ್ತ್ರೀಯನ್ನು ಕೇವಲ ಸ್ತ್ರೀ ಮಾತ್ರ ಯಶಸ್ವಿಯಾಗಿ ಚಿತ್ರಿಸಲು ಸಾಧ್ಯ ಎಂಬ ನಂಬಿಕೆಯನ್ನು ಹುಸಿಗೊಳಿಸುವ ರೀತಿಯಲ್ಲಿ ಪುರುಷ ಬರಹಗಳು ಮೂಡಿಬಂದವು. ಏಕೆಂದರೆ ಒಬ್ಬ ಪುರುಷ ಕೂಡಾ ಸ್ತ್ರೀಯಷ್ಟೇ ಸಹಜವಾಗಿ ಸ್ತ್ರೀಯನ್ನು, ಅವಳ ಅಂತಃಕರಣವನ್ನು, ಅವಳ ಮನಸ್ಸನ್ನು, ಅವಳ ಸಮಸ್ಯೆಯನ್ನು ತನ್ನದನ್ನಾಗಿ ಮಾಡಿಕೊಂಡು



Scanned with CamScanner

# ಮರೆಯದ ಮಾಣಿಕ್ಯ ಪಂಡಿತ ದೀನದಯಾಳ ಉಪಾಧ್ಯಾಯ



ಸಂಪಾದಕರು :

**ಡಾ. ವಿದ್ಯಾವತಿ ಜಿ. ರಜಪೂತ**

**ಡಾ. ಸುಕನ್ಯಾ ಮೇರಿ ಜೆ.**

**ಡಾ. ಸುಮಾ ಟಿ. ಆರ್.**

**ಕುಮಾರಿ ಆರತಿ ಪಟ್ಟಂದಾ**

೧೪. ಪಂಡಿತ ದೀನದಯಾಳ ಉಪಾಧ್ಯಾಯರ ಕೊಡುಗೆಗಳು
 – ಡಾ. ಶೈಲಜಾ ತ. ಅಮರಶೆಟ್ಟಿ ೮೧
೧೫. ನಮ್ಮ ರಾಷ್ಟ್ರದ ಆತ್ಮ ಕುರಿತು, ಪಂಡಿತ ದೀನದಯಾಳ ಉಪಾಧ್ಯಾಯರ ಚಿಂತನೆಗಳು
 – ಉಮೇಶ ಸು. ಕೋಹಳ್ಳಿ ೮೪
೧೬. ಮಹಾ ಮಾನವತಾವಾದಿ 'ಪಂಡಿತ ದೀನದಯಾಳ ಉಪಾಧ್ಯಾಯ'
 – ಬಸವರಾಜ ಮ.ಜನಗೌಡ ೮೭
೧೭. ದೀನರಿಗೆ ದಯಾಳುವಾಗಿದ್ದ ಉಪಾಧ್ಯಾಯ
 – ಪ್ರೊ. ಎಚ್. ವ್ಹಿ. ಕಾಶಿನಾಥ ಶಾಸ್ತ್ರಿ ೯೪
೧೮. ರಾಷ್ಟ್ರೀಯ ಅಸ್ಮಿತತೆ, ದೀನದಯಾಳ ಉಪಾಧ್ಯಾಯರ ವಿಚಾರಧಾರೆ
 – ರೂಪಾ ಮಾ ಖೋತ ೯೯
೧೯. ಪಂಡಿತ ದೀನದಯಾಳರ ಮಾದರಿಯ ವ್ಯಕ್ತಿತ್ವ
 – ಡಾ. ಶಶಿಕಲಾ ದಂಡಗಿಮಠ ೧೦೩
೨೦. ಪಂಡಿತ ದೀನದಯಾಳ ಉಪಾಧ್ಯಾಯರ, "ಏಕಾತ್ಮ ಮಾನವ-ವಾದ" ಒಂದು ಸೈದ್ಧಾಂತಿಕ ಕೃತಿ
 – ಡಾ. ಅರುಣಾ. ಕಟ್ಟಿಮನಿ ೧೦೬
೨೧. ಪಂಡಿತ ದೀನದಯಾಳ ಅವರ ರಾಷ್ಟ್ರಪ್ರೇಮದ ಚಿಂತನೆಗಳು
 – ರೆಹಮಾನ ಆಯ್. ಗೊರಜನಾಳ ೧೧೧
೨೨. ಪಂಡಿತ ದೀನದಯಾಳರವರ ರಾಷ್ಟ್ರಪ್ರೇಮ
 – ಡಾ. ವಿಜಯಶ್ರೀ ಹಿರೇಮಠ ೧೧೮
೨೩. ರಾಷ್ಟ್ರ ನಿರ್ಮಾಣ ಕಾರ್ಯ : ದಯಾಳಜೀ ಅವರ ಮೋಹಕ ವ್ಯಕ್ತಿತ್ವ
 – ಡಾ. ಸವಿತಾ ಕೊಟಬಾಗಿ, ಡಾ. ಅರುಂಧತಿ ಎಫ್. ಬದಾಮಿ ೧೨೧

# ರಾಷ್ಟ್ರ ನಿರ್ಮಾಣದ ಕಾಯಕ : ದಯಾಳಜೀ ಅವರ ಮೋಹಕ ವ್ಯಕ್ತಿತ್ವ

- ಡಾ. ಸವಿತಾ ಕೊಟಬಾಗಿ
ಎಸ್.ಎಸ್.ಎಸ್.ಸಿ. ಡಾ. ಬಿ. ಆರ್. ಅಂಬೇಡ್ಕರ ಸ್ಮಾರಕ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ

- ಡಾ. ಅರುಂಧತಿ ಎಚ್. ಬಡಾಮಿ
ಕೆ.ಎಲ್.ಇ. ಸಂಸ್ಥೆಯ ಎಸ್.ವ್ಹಿ.ಎಸ್. ಬೆಳ್ಳುಬ್ಬಿ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ

ರಾಷ್ಟ್ರೀಯತೆ ಎಂದರೆ "ತಮ್ಮ ಜನತೆ, ರಾಷ್ಟ್ರ, ಭಾಷೆ, ಸಂಸ್ಕೃತಿ ಮತ್ತು ಜನಾಂಗಗಳ ಬಗ್ಗೆ ಹೊಂದಿರುವ ಪ್ರೇಮ. ಇದು ಅತಿಯಾದಾಗ ಸಂಕುಚಿತ ಭಾವನೆ ಉದಯವಾಗಿ ಸ್ವರಾಷ್ಟ್ರದ ಬಗ್ಗೆ ಹೆಮ್ಮೆಯೂ ಮತ್ತು ಅನ್ಯರ ಬಗೆಗೆ ಕೀಳು ಭಾವನೆಯೂ ಮೂಡುತ್ತದೆ." (ಎಚ್.ಆರ್.ಕೆ-ಆಧುನಿಕ ಯೂರೋಪ, ಪುಟ-೧೨೬) ಜಗತ್ತಿನ ಆಯಾ ದೇಶದ ಜನತೆ ತನ್ನ ರಾಷ್ಟ್ರದ ಬಗ್ಗೆ ಹೊಂದಿರುವ ಪ್ರೀತಿ, ಅಭಿಮಾನ, ಗೌರವದ ಪವಿತ್ರ ಭಾವನೆಯಾಗಿದೆ. ಇದು ಕೇವಲ ನೆಲ-ಜಲಕ್ಕೆ ಸಂಬಂಧಿಸಿದ ಭಾವನಾತ್ಮಕ ಸಂಬಂಧವಲ್ಲ. ದೇಶದ ಸಂಸ್ಕೃತಿ, ಪರಂಪರೆ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಸೈನಿಕ ಹೀಗೆ ಸಮಸ್ತ ವಿಷಯಗಳನ್ನೊಳಗೊಂಡ ಸಂಗತಿಯಾಗಿದೆ. ತಾಯಿ ತನ್ನ ಮಕ್ಕಳ ಉನ್ನತಿಗಾಗಿ ಸಕಲ ವಿಷಯಗಳಲ್ಲಿ ಅವರನ್ನು ಪಾರಂಗತ ಮಾಡುವಂತೆ ರಾಷ್ಟ್ರದ ಏಳಿಗೆಗಾಗಿ ಸರ್ವತೋಮುಖವಾಗಿ ಸಮೃದ್ಧಗೊಳಿಸುವ ನಿಟ್ಟಿನಲ್ಲಿ ದೇಶದ ಜನತೆಯ ಮನಸ್ಸು ಹಾತೊರೆಯಬೇಕು. ಅಂದಾಗ ಮಾತ್ರ ರಾಷ್ಟ್ರೀಯತೆಯ ಪರಿಕಲ್ಪನೆ ಪ್ರಫುಲ್ಲವಾದೀತು.

ಅಂತಹ ಅನೇಕ ಜನ ರಾಷ್ಟ್ರಪ್ರೇಮಿಗಳಲ್ಲಿ ಪಂಡಿತ ದೀನ ದಯಾಳ ಉಪಾಧ್ಯಾಯ ಅವರೂ ಒಬ್ಬರು. ದಯಾಳಜಿ ರಾಷ್ಟ್ರದ ಬಗ್ಗೆ ಹೊಂದಿದ್ದ ಕನಸು, ಕಾಳಜಿ, ರಾಷ್ಟ್ರೀಯತೆಯ ಪ್ರಫುಲ್ಲ ಪರಿಕಲ್ಪನೆಯಿಂದಾಗಿ ಭಾರತದಂತಹ ಭವ್ಯ ರಾಷ್ಟ್ರವನ್ನು ಕಟ್ಟಲು ಸಾಧ್ಯವಾಯಿತು ಎಂದು ಹೇಳುವುದು ಅತಿಶಯೋಕ್ತಿಯೇನಲ್ಲ. ಸಾಕಷ್ಟು ವಿಷಯಗಳಲ್ಲಿ ಪರಿಣಿತರಾಗಿದ್ದ ದಯಾಳಜಿ ಅವರ ಮೋಹಕ ವ್ಯಕ್ತಿತ್ವ ರಾಷ್ಟ್ರಸೇವಕರು ರಾಷ್ಟ್ರಸೇವೆಗೆ ಸನ್ನದ್ಧರಾಗುವಂತೆ ಹುರಿದುಂಬಿಸಿತಲ್ಲದೇ ಅವರನ್ನು ಕಾರ್ಯತೃಪ್ತರನ್ನಾಗಿಸಿತು. ಅನೇಕ ವಿಷಯಗಳ ಬಗ್ಗೆ ಅವರಿಗಿದ್ದ ಆಳವಾದ ಜ್ಞಾನ, ಅಧ್ಯಯನ, ಮಾತಿನ ಚಾಕಚಾಕ್ಯತೆ, ಹಾಸ್ಯ ಮನೋಭಾವ, ಕಾರ್ಯಮಗ್ನತೆ,

# ಮಹೋನ್ನತ

## ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ನೋಟ



ಪ್ರಧಾನ ಸಂಪಾದಕರು

ಪ್ರೊ. ಬಿ.ಬಿ. ಡಂಗನವರ • ಡಾ. ಆರ್. ಬಿ. ಪಾಟೀಲ

**MAHONNATA :** Cheif Edited by : Prof. B. B. Denganavar, Basaveshwar degree College Basavan Bagevadi.Dr. R. V. Patil, J.S.S.,Degree College, Vidyagiri-Dharwad

| | |
|---|---|
| Co-Editor | : Dr. M. S. Maganageri, Dr. S. M. Nalatavad |
| Publisher | : Soumya Prakashan BJP-F-27-2012-13<br>Mahabaleswar Colony, Vijayapur |
| First Edition | : 2018 |
| © | : Publisher |
| Copies | : 1000 |
| Pages | : xviii + 386 |
| Price | : **Rs. 300/-** |
| Book Size | : Demy 1/8 |
| Paper Used | : 70 GSM N.S. Maplitho |
| ISBN | : 978-93-83813-32-2 |

| | |
|---|---|
| ಮಹೋನ್ನತ | : ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ನೋಟ |
| ಪ್ರಧಾನ ಸಂಪಾದಕರು: | ಪ್ರೊ. ಬಿ.ಬಿ.ಡೆಂಗನವರ<br>ಡಾ. ಆರ್. ವಿ. ಪಾಟೀಲ |
| ಸಹ ಸಂಪಾದಕರು | : ಡಾ. ಎಸ್. ಎಂ. ನಾಲತವಾಡ<br>ಡಾ. ಎಂ. ಎಸ್. ಮಾಗಣಗೇರಿ |
| ಪ್ರಕಾಶಕರು | : ಸೌಮ್ಯ ಪ್ರಕಾಶನ ಬಜೆಪಿ-ಎಫ್-೨೭-೨೦೧೨-೧೩<br>ಮಹಾಬಳೇಶ್ವರ ಕಾಲೋನಿ, ವಿಜಯಪುರ |
| ಮೊದಲ ಮುದ್ರಣ | : ೨೦೧೮ |
| ಹಕ್ಕುಗಳು | : ಪ್ರಕಾಶಕರವು |
| ಪ್ರತಿಗಳು | : ೧೦೦೦ |
| ಪುಟಗಳು | : xviii + ೩೮೬ |
| ಬೆಲೆ | : ರೂ. ೩೦೦/- |
| ಪುಸ್ತಕದ ಆಕಾರ | : ಡೆಮಿ ೧/೮ |
| ಬಳಸಿದ ಕಾಗದ | : ೭೦ ಜಿ.ಎಸ್.ಎಮ್. ಎನ್.ಎಸ್.ಮ್ಯಾಪಲಿಥೋ |

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 8884495331, 9448223602